*ಸುಚಿತ್ರಾ ಶ್ರೀಕಾಂತ ನರಸಾಪುರ, ಶಿವಮೊಗ್ಗ*

*ಎಲ್ಲ ಮಂತ್ರಿಗಳ ಬಾಯಿಗೆ ಬೀಗ ಹಾಕಿಬಿಟ್ಟರೆ ಏನಾಗುತ್ತದೆ?*



ಪಿಎಗಳ ಮೂಲಕ ಲಂಚವೃದ್ಧಿಯಾಗುತ್ತದೆ!

*ರಮೇಶ್, ಹನುಮನಾಳು*

*ಮೌನ ಯಾವುದರ ಸಂಕೇತ ಎಂದು ಇಲ್ಲೊಬ್ಬಳು ಕೇಳುತ್ತಾಳೇಕೆ?*

ಮೌನ ಬಂಗಾರ ಎಂದಿದೆಯಲ್ಲಾ...
ಜ್ಞಾಪಿಸಿಯಾದರೂ ಪಡೆಯೋಣ ಎಂದಿರಬಹುದು!

*ರವೀಂದ್ರನಾಥ ಶಿ. ಯಡಹಳ್ಳಿ, ಇಲಕಲ್ಲ*

*ರೌಡಿಸಂಗೂ, ಪ್ರೇಮಿಸಂಗೂ ಇರುವ ವ್ಯತ್ಯಾಸವೇನು ಗುರುವರ್ಯಾ?*

ಒಂದರಿಂದ ಮನೆ ಹಾಳು, ಇನ್ನೊಂದರಿಂದ ಮನ ಹಾಳು!

*ಎಂ.ಎಸ್.ಗುರುರಾಜಾಚಾರು, ಬಳ್ಳಾರಿ*

*ಅಡಿಕೆ ಕದ್ದರೆ ಆನೆ ಕದ್ದಂತೆ; ಓಟು ಕದ್ದರೆ?*

ಸೀಟು ಗೆದ್ದಂತೆ!

*ಶ್ವೇತಲಕ್ಷ್ಮಿ ಅಮ್ಮೈ, ಬೆಂಗಳೂರು*

*ಈ ಪ್ರಪಂಚದಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳೇ ಇರದಿದ್ದರೆ ಏನಾಗುತ್ತಿತ್ತು?*



ಮೇಣದ ಬತ್ತಿ, ತಾನೇ ಸೂರ್ಯನೆಂದು ಬೀಗುತ್ತಿತ್ತು.

*ಎಚ್.ಎನ್.ನಟರಾಜು, ಗೋಕುಲ*

*ಧಮ್ ಪತಿಗೂ, ದಂಪತಿಗೂ ಇರುವ ವ್ಯತ್ಯಾಸವೇನು?*

ಸಿಗರೇಟಿನ ಧಮ್ ಎಳೆಯಲು ಆರಂಭಿಸಿದವನು ಧಮ್ ಪತಿ; ಉಲ್ಬಣಿಸಿ ಉಬ್ಬಸರೊಗ (ದಂ) ತಂದುಕೊಂಡವನು ದಂ ಪತಿ!

*ರಾಜಶೇಖರಶೆಟ್ಟಿ, ದೊಡ್ಡಬಳ್ಳಾಪುರ*

*ಇತ್ತೀಚೆಗೆ ನಡೆದ ಬಿಬಿಎಂಪಿ ಚುನಾವಣೆಯಲ್ಲಿ ನಿಮ್ಮದು ಹಸ್ತವೋ, ಕಮಲಾಲಿಂಗನವೋ, ರೈತಮಹಿಳೆಯೊಂದಿಗೆ ಯುಗಳ ಗೀತೆಯೋ?*

ನನಗೆ ಎಲ್ಲಾ ಪಕ್ಷಗಳ ಬಗ್ಗೆಯೂ ಸಮಾನವಾದ ತಿರಸ್ಕಾರವಿದೆ!

*ಖಲಂದರ್ ಅಝೀಝ್, ಜಾವಗಲ್*

*ಹೆಣ್ಣು, ಹೊನ್ನು, ಮಣ್ಣು ಇವುಗಳಲ್ಲಿ ಯಾವುದು ಉತ್ತಮ?*

ಆಳುವಾಗಲೂ, ಅಳಿದಾಗಲೂ ಜೊತೆ ಇರುವ ಮಣ್ಣೇ!

*ಎಂ.ಆರ್.ಪವನ್ ಕುಮಾರ್, ಬಳ್ಳಾರಿ*

*ರಾಜಕೀಯದಲ್ಲಿ ಉಸಿರು ಕಟ್ಟಿದ ವಾತಾವರಣ ಎಂದರೆ ಏನು?*

ಉಸಿರು ಉಸಿರಿಗೂ ಸಿಗುವ ಪ್ರಮಾಣದ ಲಂಚ ಸಿಗುತ್ತಿಲ್ಲವೆಂದು!

*ಸಿ.ಕೊಟ್ರೇಶ, ಹಗರಿಬೊಮ್ಮನಹಳ್ಳಿ*

*ನಿರಾಭರಣ ಸುಂದರಿಗೂ, ಆಭರಣ ಸುಂದರಿಗೂ ಏನು ವ್ಯತ್ಯಾಸ?*

ಆಭರಣಗಳು ಹಾಗೂ ಮೇಕಪ್‌ಗಾಗಿ ಮಾಡುವ ಖರ್ಚು!

*ಹೆಚ್.ಎಸ್.ಶಿವಶಂಕರ್, ಚಿಕ್ಕಲಸಂದ್ರ*

*ಹನಿಮೂನ್ ಎಂದರೇನು?*

ಜೇನಿನಂತಹ ಕ್ಷಣಗಳನ್ನು ಬೆಳದಿಂಗಳಿನಂತಹ ತಂಪಿನಲ್ಲಿ ಹೊಂದುವುದೆಂದು!

*ಎನ್.ಎ.ರಾಘವೇಂದ್ರ, ಬೆಂಗಳೂರು*

*ಆಸ್ತಿಕತೆಗೂ, ನಾಸ್ತಿಕತೆಗೂ ಇರುವ ಅಂತರವೇನು ಗುರುವರ್ಯಾ?*

ಕೋರ್ಟ್‌ಗೆ ಹೋಗುವ ಮುನ್ನ ಆಸ್ತಿಕತೆ, ಕೇಸ್ ಮುಗಿಯುವಷ್ಟರಲ್ಲಿ ನಾಸ್ತಿಕತೆ!

*ಅರ್ಪಿತ ಬಿ.ಕೆ.ಎಸ್, ಜೂಗನಹಳ್ಳಿ*

*ದಾನ ಮಾಡುವ ಮನಸ್ಸಿದೆ, ಶೃಂಗೇರಿ ಶಾರದೆಗೆ ಕೊಡಲೋ, ಬಡ ವಿದ್ಯಾರ್ಥಿಗೆ ಕೊಡಲೋ?*

ಬಡ ವಿದ್ಯಾರ್ಥಿಗೇ ಕೊಡಿ. ಶಾರದೆಯೂ ಅಸ್ತು ಎಂದಾಳು!

*ಎಂ.ಕೆ.ರವಿಕಾಂತ, ತುಮಕೂರು*

*ಕನ್ನಡ ಕವಿಗಳ ಕವನವೊಂದನ್ನು ಕನ್ನಡ ಚಿತ್ರಗಳಲ್ಲಿ ಖಡ್ಡಾಯವಾಗಿಸಿದರೆ ಹೇಗೆ?*

ಶ್ರಾವಣ ಬಂತು ಕಾಡಿಗೆ, ನಾಡಿಗೆ, ಬೀಡಿಗೆ ಎಂದರೆ ಕಣ್ಕಪ್ಪು, ನಾಡಿ, ಬೀಡಿಗಳ ಮೇಲೆ ಚಿತ್ರೀಕರಣ ನಡೆದೀತು; ನಿಮಗೇಕೆ ಕವಿಗಳ ಮೇಲೆ ಈ ಪರಿಯ ದ್ವೇಷ?

## ಬಹುಮಾನಿತ ಪ್ರಶ್ನೆ

ಗೀತಾ ಟಿ, ರೆಡ್ಡಿ, ಬೆಂಗಳೂರು

ಇದ್ದಾಗ ಸಿಗದ ಹೊಗಳಿಕೆ ಸತ್ತಮೇಲೇಕೆ?

ಇದ್ದಾಗ ಹೊಗಳಿದರೆ ಪ್ರಶಸ್ತಿ, ಪದವಿ, ಪುರಸ್ಕಾರ ಕೇಳಿಯಾರೆಂಬ ಭಯ!

*ನಾರಾಯಣ, ಗುಗ್ಗರಹಟ್ಟಿ*

*ಕರ್ನಾಟಕದಲ್ಲಿ ನೀರು, ನೆರಳು ಇಲ್ಲದ ಜಾಗ ಎಲ್ಲಿಯಾದರೂ ಇದೆಯಾ?*

ವಿಧಾನಸೌಧದ ಮುಂಭಾಗವೇ ಇದೆಯಲ್ಲಾ...!

*ಅಕ್ಷಯ, ಕಾಂತಾಬೈಲು*

*ಮಂತ್ರಿಗಳ ಭಾಷಣ ಮುಗಿದ ಮೇಲೆ ಎಲ್ಲರೂ ಚಪ್ಪಾಳೆ ತಟ್ಟುವುದು, ಬೆಂಬಲಕ್ಕೋ, ಅಪಹಾಸ್ಯಕ್ಕೋ?*

ತೆಗೆದುಕೊಂಡಿರುವ ಕಾಸಿನ ಮುಲಾಜಕ್ಕೆ!

*ಪಿ.ಜೆ.ರಾಘವೇಂದ್ರ, ಮೈಸೂರು*

*ಮೆಟ್ಟಿಲನ್ನು ಮೇಲಿನಿಂದ ಗುಡಿಸಿ ಸ್ವಚ್ಛ ಮಾಡುವಂತೆ ಭ್ರಷ್ಟಾಚಾರವನ್ನೂ...?*

ಪೇದೆ, ಗುಮಾಸ್ತರನ್ನು ಹಿಡಿದು, ಮೇಲೆ ಮೇಲೆ ಗುಡಿಸಿದಂತೆ ಮಾಡಿ, ಮೆಟ್ಟಿಲಿನಷ್ಟೇ ಭದ್ರವಾಗಿ ...

*ಪಿ.ಎನ್.ಶ್ರೀವತ್ಸ, ಬೆಂಗಳೂರು*

*ಬೆಂಗಳೂರು ಇದೇ ರೀತಿ ಬೆಳೆದರೆ ಪಿಂಡ ತಿನ್ನಲೂ ಕಾಗೆಗಳಿಲ್ಲದಂತಾಗಬಹುದಲ್ಲವೇ?*



ಹೆದರಬೇಡಿ, ನಾನಿದ್ದೇನೆ ಎಂದನೊಬ್ಬ ರಾಜಕಾರಣಿ!

*ಎ.ಎಸ್. ಸ್ವಾಮಿ, ಶೋರಾಪುರ*

*ಅಜಾತಶತೃವಿನಂತಿರಬೇಕಾದರೆ...!?*

ಅಂದರಿಕೂ ಮಂಚಿವಾಡು ಆಗುವುದನ್ನು ಕಲಿಯಬೇಕು!

*ಹಾಡ್ಯ ಜಯಾನಂದ, ಮೈಸೂರು*

*ಕನಸುಗಳನ್ನು ವಿಡಿಯೋ ಚಿತ್ರೀಕರಣ ಮಾಡುವಂತಾದರೆ ಏನಾಗುತ್ತದೆ?*

ಕಣ್ಣಿಗೆ ಕಾಂಟಾಕ್ಟ್ ಲೆನ್ಸ್‌ನೊಡನೆ ವಿಡಿಯೋ ಲೆನ್ಸನ್ನೂ ಅಳವಡಿಸಿ, ಕಿವಿಯಿಂದ ವಿಸಿಡಿ ಹೊರತೆಗೆಯಲಾಗುವುದೇನೋ...!

*ಎಂ.ಎನ್.ಸೋಮಶೇಖರ್, ಮೈಸೂರು*

*ಭೂತ, ಪ್ರೇತಗಳು ಇರುವುದು ಸತ್ಯವೇ? ನಿಮ್ಮ ಅನುಭವ ಹೇಗೆ?*

ಸತ್ಯ ವಿಧಾನಸೌಧ, ಪಾರ್ಲಿಮೆಂಟ್‌ಗಳಲ್ಲಿ ಇರುತ್ತವೆ; ನನ್ನ ಅನುಭವ ಶೂನ್ಯ, ಏಕೆಂದರೆ ನಾನಿನ್ನೂ ಭೂತವಾಗಿಲ್ಲ!

■ ರಾಮ್